

ಭಾರೀ ಶ್ರೀಮಂತರೆಂದೇ ಅರ್ಥ. ಉಪ್ಪಿಟ್ಟು ಶೀರಾದೊಂದಿಗೆ ಬಾಳೆಹಣ್ಣು, ಬಾದಾಮಿ ಹಾಲು ಕೊಟ್ಟರೆ ಹುಡುಗಿ ಮನೆತನದವರು ಪಟೇಲರು ಅಥವಾ ದೊಡ್ಡ ಜಮೀನ್ದಾರರಾಗಿಬೇಕು ಎಂಬ ಲೆಕ್ಕಾಚಾರ. ಆದರೆ ಈಗ ಉಪ್ಪಿಟ್ಟು ಕೊಟ್ಟರೆ, ಅಯ್ಯೋ ಎನ್ನುತ್ತಾರೆ. 'ಎಷ್ಟು ಮನೆ ಉಪ್ಪಿಟ್ಟು–ಕೇಸರಿಬಾತ್ ತಿಂದೆ' ಎಂದು ಹುಡುಗನನ್ನು ಛೇಡಿಸುತ್ತಾರೆ.

ಉಪ್ಪಿಟ್ಟು ಸಂಗೀತಕ್ಕೆ ತಳಕು ಹಾಕಿಕೊಂಡಿರುವ ಪರಿ ಗೊತ್ತೇ? ಒಂದು ಕಾಲಘಟ್ಟದಲ್ಲಿ ಸಂಗೀತ ವಿಮರ್ಶಕರು ಎರಡು ಮೂರು ಗಂಟೆಯಲ್ಲಿ 10–15 ಕೃತಿಗಳನ್ನು ಹಾಡಿ ಮುಗಿಸುವ ಕರ್ನಾಟಕ ಸಂಗೀತ ಕಲಾವಿದರನ್ನು 'ಉಪ್ಪಿಟ್ಟು ಕಲಾವಿದರು' ಎಂದು ಕರೆಯುತ್ತಿದ್ದರಂತೆ. ಕೆಲವೇ ನಿಮಿಷಗಳ ಆಲಾಪನೆ, ಕೆಲವು ನಿಮಿಷಗಳ ಸ್ವರ ಪ್ರಸ್ತಾರ ಇತ್ಯಾದಿಗಳ ಮುಖಾಂತರ ಒಂದು ಸಂಗೀತ ಕಛೇರಿಯನ್ನು ಲಗುಬಗೆಯಿಂದ ಮುಗಿಸುವ ಕಲಾವಿದರ ಮನೋ ಪ್ರವೃತ್ತಿಯನ್ನು ವಿಮರ್ಶಕರು ಹೀಗೆ ಕರೆದದ್ದಿದೆ.

ನಾವು ಸಣ್ಣವರಿದ್ದಾಗ ಎಲಿಮೆಂಟರಿ ಶಾಲೆಯಲ್ಲಿ ಮಧ್ಯಾಹ್ನ ಉಪ್ಪಿಟ್ಟು ಸಿಗುತ್ತಿತ್ತು. ಅದು ಗೋಧಿಕಡಿ ಉಪ್ಪಿಟ್ಟು. ಸಮೃದ್ಧವಾಗಿ ತರಕಾರಿ, ಈರುಳ್ಳಿ ಹಾಕಿದ ಉಪ್ಪಿಟ್ಟು ನಮ್ಮ ಹೊಟ್ಟೆ ಗಟ್ಟಿ ಮಾಡುತ್ತಿತ್ತು. ಹೊಟ್ಟೆ ಬಿರಿಯೇ ತಿಂದ ನಮಗೆ ಮಧ್ಯಾಹ್ನದ ಮೊದಲ ಕ್ಲಾಸಿನ ರೇಖಾಗಣಿತ ಅರ್ಥವಾಗಲು ಸಾಧ್ಯವೇ? ಸರಳರೇಖೆ ವಕ್ರವಾಗಿಯೂ, ಚೌಕ, ವೃತ್ತವಾಗಿಯೂ ಕಾಣಿಸುತ್ತಿತ್ತು! ಪೈಥಾಗೊರಸನ ಪ್ರಮೇಯ ಅಪ್ಪನಾಣೆಗೂ ಅರ್ಥವಾಗಲು ಸಾಧ್ಯವಿರಲಿಲ್ಲ. ಎಷ್ಟೋ ಬಾರಿ ತೂಕಡಿಸುತ್ತಿದ್ದ ನನ್ನನ್ನು ಅಧ್ಯಾಪಕರು ಬೆಂಚಿನ ಮೇಲೆ ನಿಲ್ಲಿಸಿದ್ದಿದೆ. 'ಸಮಾ ಉಪ್ಪಿಟ್ಟು ತಿಂದು ಕುಂಭಕರ್ಣನ ಹಾಗೆ ಮಲಗುವುದಕ್ಕೆ ನಾಚಿಕೆ ಆಗುವುದಿಲ್ಲ ನಿನಗೆ' ಎಂದು ಬೈಯುತ್ತಿದ್ದರು. ನಮ್ಮ ನಿದ್ದೆಯ ಮೂಲ ಪತ್ತೆಹಚ್ಚಿದ ಅವರು 'ಉಪ್ಪಿಟ್ಟು ತಿಂದು ಮಲಗುವವರು ಕುಂಭಕರ್ಣನ ಸಂತತಿಯವರು. ಉಪ್ಪಿಟ್ಟು ಗೋವಿಂದ, ಗಣಿತವೂ ಗೋವಿಂದ' ಎಂದು ಹಾಸ್ಯ ಮಾಡುತ್ತಿದ್ದರು.

ವಿಚಾರವಾದಿ ಎಚ್. ನರಸಿಂಹಯ್ಯನವರು ಕೂಡ ತಮ್ಮ ಜೀವಮಾನ ಪೂರ್ತಿ ಉಪ್ಪಿಟ್ಟನ್ನೇ ನೆಚ್ಚಿಕೊಂಡಿದ್ದರು. ವಿದೇಶದಲ್ಲಿದ್ದಾಗ ಅವರಿಗೆ ದಿನದ ಮೂರು ಹೊತ್ತು ಅದೇ ಆಹಾರವಾಗಿತ್ತಂತೆ. ವರ್ಷಗಟ್ಟಲೆ ಸತತವಾಗಿ ಉಪ್ಪಿಟ್ಟನ್ನೇ ತಿಂದ ವಿಶ್ವದಾಖಲೆ ಅವರದು.

ಆಗ ಮನೆಮಂದಿಗೆಲ್ಲಾ ಅಜ್ಜ ಶ್ಲೋಕ ಹೇಳಿಕೊಡುತ್ತಿದ್ದರು. ಅದರಲ್ಲಿ 'ಉತ್ತಿಷ್ಠೋತ್ತಿಷ್ಠ ಗೋವಿಂದ' ಎನ್ನುವ ಶ್ಲೋಕವೂ ಇತ್ತು. ನಮಗೆ ಆ ಕಷ್ಟದ ಶಬ್ದ ಹೇಳಲು ಬರದೇ ಹೇಗೇಗೋ ಉಚ್ಚರಿಸುತ್ತಿದ್ದೆವು. ಕೊನೆಗೆ 'ಉಪ್ಪಿಟ್ಟೋ ಉಪ್ಪಿಟ್ ಗೋವಿಂದ' ಎಂದು ತೇಲಿಸಿಬಿಡುತ್ತಿದ್ದೆವು. ಆ ಕಾಲದಲ್ಲಿ ನಮಗೆ ತಿನ್ನುವುದು ಬಿಟ್ಟರೆ ಬೇರೆ ಚಿಂತನೆಗಳೇ ಇರಲಿಲ್ಲ. ಹಾಗಾಗಿ ನಮಗೆ ಉಪ್ಪಿಟ್ಟೇ ದೇವರು, ಅದೇ ಪ್ರಪಂಚ.

ಆದರೆ ಉಪ್ಪಿಟ್ಟು ಒಂದು ಬಾರಿ ನನ್ನನ್ನೇ ಗೋವಿಂದಾ ಎನ್ನಿಸುವ ಮಟ್ಟಕ್ಕೆ ತಂದಿಟ್ಟಿತ್ತು. ಉದ್ಯೋಗ ನಿಮಿತ್ತ ದೆಹಲಿಗೆ ಹೋಗಿದ್ದಾಗ ಗೆಳೆಯನೊಬ್ಬ 'ಬೆಳಗಿನ ತಿಂಡಿಗೆ ಮನೆಗೆ ಬಾ' ಎಂದು ಬಲವಂತ ಮಾಡಿದ. ದೆಹಲಿಯಲ್ಲಿ ಇದ್ದಷ್ಟು ದಿನ ರೋಟಿ–ಪರಾಠ ತಿಂದು ನಾಲಗೆ ಕೆಟ್ಟುಹೋಗಿತ್ತು. 'ನಿನಗೆ ಇಷ್ಟವಾದ ಉಪ್ಪಿಟ್ಟನ್ನೇ ಮಾಡಿಸುತ್ತೇನೆ' ಎಂದು ಗೆಳೆಯ ಹೇಳಿದಾಗ ಹೋಗದೇ ಇರಲು ಸಾಧ್ಯವೇ?

ಅವನ ಹೆಂಡತಿ ಉತ್ತರ ಭಾರತೀಯಳು. ಪಾಪ ಆಗಷ್ಟೇ ಅಡುಗೆ ಕಲಿತಿದ್ದ ಆಕೆ ತರಕಾರಿ ಉಪ್ಪಿಟ್ಟನ್ನೇನೋ ಮಾಡಿದ್ದಳು. ಆದರೆ ಸರಿಯಾಗಿ ರವೆ ಹುರಿದಿರಲಿಲ್ಲ. ನೀರು ಹೆಚ್ಚಾಗಿ ಥೇಟ್ ಪೇಸ್ಟ್‌ನಂತೆಯೇ ಕಾಣುತ್ತಿತ್ತು. ನಾಲ್ಕೈದು ಚಮಚ ತಿಂದೆ ಅಷ್ಟೇ, ಆಮೇಲೆ ಜಪ್ಪಯ್ಯ ಎಂದರೂ ತಿನ್ನಲಾಗುತ್ತಿಲ್ಲ. 'ರುಚಿ ಹೇಗಾಗಿದೆ' ಎಂದು ಗೆಳೆಯ ಕೇಳಿದಾಗ, 'ತುಂಬಾ ಚೆನ್ನಾಗಿದೆ' ಎಂದು ಬಾಯುಪಚಾರಕ್ಕೆ ಹೇಳಿದೆ. ಅದೇ ದೊಡ್ಡ ತಪ್ಪಾಗಿ ಹೋಯ್ತು. ಬಲವಂತದಿಂದ ಮತ್ತಷ್ಟು ಬಡಿಸಿದ. ಹಾಗೂ ಹೀಗೂ ಉಪ್ಪಿಟ್ಟನ್ನು ಮುಗಿಸಿ ರೂಮಿಗೆ ಮರಳಿದೆ.

ಉಪ್ಪಿಟ್ಟು ನನ್ನ ಹೊಟ್ಟೆಯಲ್ಲಿರಲಾರದೆ ಸಂಘರ್ಷಕ್ಕೆ ಇಳಿಯಿತು. ಸಂಜೆಯಾಗುವಷ್ಟರಲ್ಲಿ ಎದ್ದೇಳಲಾಗದ ಪರಿಸ್ಥಿತಿ. ಅಂದಿನಿಂದ ಗೊತ್ತಿರುವ ಜಾಗದಲ್ಲಿ ಮಾತ್ರವೇ ಉಪ್ಪಿಟ್ಟಿನ ಸ್ವೀಕಾರ, ಇಲ್ಲದಿದ್ದರೆ ಇಡ್ಲಿಗೇ ಶರಣು...

ಪ್ರತಿಕ್ರಿಯಿಸಿ: feedback@sudha.co.in